ಕರ್ನಾಟಕ ವಿಧಾನ ಪರಿಷತ್

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**749** (1039)
2	ಸದಸ್ಯರ ಹೆಸರು	ಶ್ರೀ ಎನ್.ಅಪ್ಪಾಜಿಗೌಡ
3	ವಿಷಯ	ದಾಖಲೆರಹಿತ ಕಂದಾಯ ಗ್ರಾಮಗಳು
4	ಉತ್ತರಿಸಬೇಕಾದ ದಿನಾಂಕ	**10/03/2021**
5	ಉತ್ತರಿಸುವ ಸಚಿವರು	ಮಾನ್ಯ ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಹೊಸ ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ ಒಟ್ಟು **23** ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ; 1.ಮಂಡ್ಯ ತಾಲ್ಲೂಕು **–00** 2.ಮದ್ದೂರು ತಾಲ್ಲೂಕು **–05** 3.ಮಳವಳ್ಳಿ ತಾಲ್ಲೂಕು **–02** 4.ಪಾಂಡವಪುರ ತಾಲ್ಲೂಕು **–06** 5.ಕೆ.ಆರ್.ಪೇಟೆ. ತಾಲ್ಲೂಕು **–04** 6.ನಾಗಮಂಗಲ ತಾಲ್ಲೂಕು **–05** 7.ಶ್ರೀರಂಗಪಟ್ಟಣ ತಾಲ್ಲೂಕು **–01**
ಆ)	ಹೊಸದಾಗಿ ಕಂದಾಯ ಗ್ರಾಮಗಳೆಂದು ಘೋಷಿಸಿರುವ ಗ್ರಾಮಗಳಲ್ಲಿ ಇಲ್ಲಿಯವರೆಗೆ ನಿವೇಶನ ಸಂಬಂಧ ಎಷ್ಟು ಹಕ್ಕುಪತ್ರಗಳನ್ನು ನೀಡಿದೆ; (ತಾಲ್ಲೂಕುವಾರು ವಿವರ ನೀಡುವುದು)	ಯಾವುದೇ ಹಕ್ಕುಪತ್ರಗಳನ್ನು ವಿತರಿಸಿರುವುದಿಲ್ಲ.
ಇ)	ಕಂದಾಯ ಗ್ರಾಮಗಳೆಂದು ಗುರುತಿಸಲು ಇರುವ ಮಾನದಂಡಗಳಾವುವು; (ವಿವರ ನೀಡುವುದು)	• ಕನಿಷ್ಠ ಕುಟುಂಬಗಳ ಸಂಖ್ಯೆ ಸುಮಾರು 50 ಅಥವಾ ಜನಸಂಖ್ಯೆ ಸುಮಾರು 250ನ್ನು ಹೊಂದಿರುವ ದಾಖಲೆರಹಿತ ಜನವಸತಿ ಪ್ರದೇಶಗಳು. • ಗ್ರಾಮಕ್ಕಿರಬೇಕಾದ ಜಮೀನಿನ ವಿಸ್ತೀರ್ಣ ಕನಿಷ್ಠ ಸುಮಾರು 100 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು–(ಈ ಷರತ್ತನ್ನು ಬೆಟ್ಟಗುಡ್ಡಗಳ ತಪ್ಪಲು ಮತ್ತು ಅರಣ್ಯ ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳ ಪ್ರಕರಣದಲ್ಲಿ ಸಕಾರಣದ ಸಮೇತ ಸಡಿಲಿಸಬಹುದು) • ಮೂಲ ಗ್ರಾಮಠಾಣಕ್ಕೆ ಹೊಂದಿಕೊಂಡಿರಬಾರದು.(ಮೂಲ ಗ್ರಾಮಠಾಣದಿಂದ ಅಂದಾಜು 1 ಕಿ.ಮೀ ಅಂತರ ಸೂಕ್ತ)

ಈ)	ಕಂದಾಯ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ನಿವೇಶನ ನೀಡಲು ಇರುವ ಮಾನದಂಡಗಳಾವುವು; (ವಿವರ ನೀಡುವುದು)	• ದಿನಾಂಕ:16–12–2017ಕ್ಕಿಂತ ಮೊದಲು ದಾಖಲೆಸಹಿತ ಜನವಸತಿಯಲ್ಲಿ ವಾಸವಿರುವ ಬಗ್ಗೆ ದಾಖಲೆನೀಡಬೇಕು. ಯಾವುದೇ ವ್ಯಕ್ತಿಗೆ ನಾಲ್ಕು ಸಾವಿರ ಚದರ ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನ ನೀಡಲಾಗುವುದಿಲ್ಲ. • ನಮೂನೆ 3–ಸಿ ಯಲ್ಲಿ ನಿವೇಶನ ಮಂಜೂರಾತಿಗೆ ಅರ್ಜಿಯನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ಸಲ್ಲಿಸುವುದು. • ತಹಶೀಲ್ದಾರ್ ರವರು ವಿಚಾರಣೆ ನಡೆಸಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಹಾಗೂ ಇತರೆ ಇಲಾಖೆಗಳಿಂದ ನಿಯಮಾನುಸಾರ ಪರಿಶೀಲನಾ ವರದಿ ಪಡೆದು ಅರ್ಹ ಫಲಾನುಭವಿಗಳಿಗೆ ನಮೂನೆ 3–ಇ ರಲ್ಲಿ ಹಕ್ಕುಪತ್ರ ನೀಡುತ್ತಿದೆ.

ಕಂಇ 03 ಪಿಎಲ್‌ಸಿ 2021

(ಆರ್. ಅಶೋಕ್)
ಕಂದಾಯ ಸಚಿವರು